Rebate on the sale of Handloom Cloth

*Q.—411. Sri A. J. DODDAMETI (Ron).—

Will the Minister for Development and Co-operation be pleased to state:—

(*a*) when the sanction of consumer rebate on the sale of handloom cloth was discontinued in Mysore State;

(*b*) the reason for not continuing the scheme even though the All India Handloom Board has recommended its continuance;

(*c*) whether it is a fact Mysore State is the only State, which has not been giving rebate on handloom cloth while all other States in India are giving;

(*d*) when the State Government proposes to revive the scheme and extend the benefit to a large number of handloom weavers societies in the State?

A.—Sri P. M. NADGOUDA (Minister for Development and Co-operation).—

(*a*) From 1st April 1964.

(*b*) The rebate facility was misused by the Weavers' Societies. Hence, Scheme was not continued.

(*c*) Does not arise in view of reply to clause (*b*) above.

(*d*) Government have decided not to revive the scheme at present.

ಶ್ರೀ ಎ. ಜೆ. ದೊಡ್ಡಮೇಟಿ.—ಈ ರಿಯಾಯಿತಿ ದುರುಪಯೋಗವಾಗದಂತೆ ವ್ಯವಸ್ಥೆಯೇನು ಮಾಡಲಾಗಿದೆ?

†ಶ್ರೀ ಪಿ. ಎಂ. ನಾಡಗೌಡ.—ಅಖಿಲ ಭಾರತ, ಕೈಮಗ್ಗದ ಮಂಡಲಿಯವರು ಪುನರ್ವಿಮರ್ಶೆ ಮಾಡಿ ಈ ರಿಯಾಯಿತಿ ಕೊಡಬೇಕೆಂದು ಸೂಚಿಸಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ದುರುಪಯೋಗವಾಗದಹಾಗೆ ಏನು ವ್ಯವಸ್ಥೆ ಮಾಡಲಾಗುವುದು? ಮತ್ತೆ ರಿಯಾಯಿತಿ ಕೊಡಲು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಪಿ. ಎಂ. ನಾಡಗೌಡ.—ಸದ್ಯಕ್ಕೆ ಇದನ್ನು ಬಳಕೆಗೆ ತರುವುದಿಲ್ಲ. ಅಖಿಲಭಾರತ ಕೈಮಗ್ಗದ ಮಂಡಲಿಯ ಆದೇಶದ ಪ್ರಕಾರ ಹೊಸ ವಿಧಾನ ರೂಪಿಸಿ ನ್ಯೂನತೆಯನ್ನು ನಿವಾರಿಸಿ ನಂತರ ರಿಯಾಯಿತಿ ಕೊಡುವುದನ್ನು ಅಮಲಿಗೆ ತರಬೇಕಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ನೇಕಾರರ ಸಂಘದವರು ರಿಯಾಯಿತಿ ಸೌಲಭ್ಯ ದುರುಪಯೋಗಪಡಿಸಿಕೊಂಡರೆ ಆ ಸಂಘಗಳಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಹೀಗೆ ರಿಯಾಯಿತಿ ಕೊಡುವುದನ್ನು ನಿಲ್ಲಿಸಿದರೆ ಬಳಕೆದಾರರಿಗಿರುವ ಸೌಲಭ್ಯವನ್ನು ಮೊಟಕು ಮಾಡಿದಂತಾಗುವುದಿಲ್ಲವೇ?

ಶ್ರೀ ಪಿ. ಎಂ. ನಾಡಗೌಡ.—ಈ ರಿಯಾಯಿತಿಯನ್ನು ಸಹಕಾರ ಸಂಘಗಳ ಮೂಲಕ ಕೊಡಬೇಕೇ ಹೊರತು ವ್ಯಕ್ತಿಗಳ ಅಥವಾ ಅಧಿಕಾರಿಗಳ ಮೂಲಕ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಶರಣಗೌಡ ಇನಾಂದಾರ್.—ಎಷ್ಟು ಹಣ ದುರುಪಯೋಗವಾಗಿದೆ? ಎಷ್ಟು ಸಂಘದವರು ದುರುಪಯೋಗ ಮಾಡಿದ್ದಾರೆ?

ಶ್ರೀ ಪಿ. ಎಂ. ನಾಡಗೌಡ.—ಬೇರೆ ಪ್ರಶ್ನೆ ಹಾಕಿದರೆ ಅದನ್ನು ತಿಳಿಸಬಹುದು.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಬಗ್ಗೆ ತೀರ್ಮಾನ ಮಾಡಲು ಎಷ್ಟು ಕಾಲ ಬೇಕು?

ಶ್ರೀ ಪಿ. ಎಂ. ನಾಡಗೌಡ.—ಅದಕ್ಕೆ ಸ್ವಲ್ಪ ವೇಳೆ ಬೇಕು; ಇಷ್ಟೇ ಕಾಲ ಬೇಕು ಎಂದು ಈಗ ಹೇಳುವುದಕ್ಕಾಗುವುದಿಲ್ಲ. ಆದರೆ ಒಂದು ಮಾತನ್ನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ 1956 ರಿಂದ 1964 ರವರೆಗೆ 125.66 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಇದರಲ್ಲಿ ಬಹಳಷ್ಟು ದುರುಪಯೋಗವಾಗಿದೆ. ಇದಕ್ಕಾಗಿ ಸರಕಾರ ಕಳಕಳಿಯಿಂದ ಬಂಯು ಮಾಡಿ ಮುಂದೆ ಪ್ರೋತ್ಸಾಹ ಕೊಡಲು, ಉನ್ನತಿಗೆ ತರಲು ಹೊಸ ವಿಧಾನ ರೂಪಿಸಲು ತಮ್ಮ ಅಭಿಪ್ರಾಯ ಮತ್ತು ತಜ್ಞರ ಅಭಿಪ್ರಾಯ ಪಡೆದು ಸೂಕ್ತ ರೀತಿಯಲ್ಲಿ ಅಮಲನಲ್ಲಿ ತರಲು ಸ್ವಲ್ಪ ಕಾಲ ಬೇಕಾಗುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ಅವರ ಕಳಕಳಿಯನ್ನು ಪ್ರಶ್ನೆ ಮಾಡಲಲ್ಲ. ಈ ಬಗ್ಗೆ ಸರಕಾರದವರು ತೀರ್ಮಾನಕ್ಕೆ ಬರಲಿಕ್ಕೆ ಎಷ್ಟು ಕಾಲ ಹಿಡಿಯುತ್ತದೆ?

ಶ್ರೀ ಪಿ. ಎಂ. ನಾಡಗೌಡ.—ಸ್ವಲ್ಪ ವೇಳೆ ಬೇಕಾಗುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ವರ್ಷವೇ, ಎರಡು ವರ್ಷವೇ, 6 ತಿಂಗಳೇ ಎಷ್ಟು?

ಶ್ರೀ ಪಿ. ಎಂ. ನಾಡಗೌಡ.—ಅದಷ್ಟು ಬೇಗ. ಆದಷ್ಟು ಶೀಘ್ರವಾಗಿ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ತಾವು ರಿಬೇಟ್ ಇಳಿಸಿದಮೇಲೆ ಈ ಹ್ಯಾಂಡ್‌ಲೂಮ್ ಸಂಸ್ಥೆಗಳ ವ್ಯಾಪಾರ ಕಮ್ಮಿ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರು ಹೇಳುವುದು ನನಗೆ ಸರಿಯಾಗಿ ಕೇಳಿಸುವುದೇ ಇಲ್ಲ.

ಶ್ರೀ ಬಿ. ಪಿ. ಗಂಗಾಧರ್.—ತಾವು ರಿಬೇಟ್ ಕೊಡುತ್ತಾ ಇದ್ದುದನ್ನು ಕಡಿಮೆ ಮಾಡಿದ ಮೇಲೆ ಈ ಸಂಘಗಳಲ್ಲಿ ಆಗುತ್ತಾ ಇದ್ದ ವ್ಯಾಪಾರ ಬಿದ್ದು ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತಾ ಇದ್ದಾರೆ.

ಶ್ರೀ ಪಿ. ಎಂ. ನಾಡಗೌಡ.—ರಿಬೇಟ್ ಕೊಡುವುದಕ್ಕೂ ಇದಕ್ಕೂ ಸಂಬಧವಿಲ್ಲ. ಧನ ಸಹಾಯ ಮಾಡುವುದು ಇದರಲ್ಲಿ ಇದೆ.

ಶ್ರೀ ಪಾಟಾಳ್ ನಾಗರಾಜ್.—ರಿಬೇಟ್ ಕೊಡುವುದನ್ನು ನಿಲ್ಲಿಸಿದ್ದರಿಂದ ವ್ಯಾಪಾರ ಏನಾದರೂ ಕಡಿಮೆಯಾಗಿದೆಯೇ ಎಂದು ಅವರು ಕೇಳಿದರು, ಅದೇ ಪ್ರಶ್ನೆಯನ್ನು ನಾನು ಕೇಳುತ್ತೇನೆ, ದಯವಿಟ್ಟು ಉತ್ತರ ಹೇಳಿ.

ಶ್ರೀ ಪಿ. ಎಂ. ನಾಡಗೌಡ.—ರಿಬೇಟ್‌ಗೂ ಇದಕ್ಕೂ ಸಂಬಂಧವಿಲ್ಲ ಎಂದು ಆಗಲೇ ಹೇಳಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ನೇಕಾರ ಸಹಕಾರ ಸಂಘಗಳು ಮಾಡುವ ತಪ್ಪಿಗೆ ಸರ್ಕಾರದವರು ಬಹಳ ಕಳಕಳಿಯಿಂದ ಬಳಕೆದಾರನಿಗೆ ಏಕೆ ಶಿಕ್ಷೆ ಮಾಡುತ್ತೀರಿ?

ಶ್ರೀ ಪಿ. ಎಂ. ನಾಡಗೌಡ—ಮಾನ್ಯ ಸದಸ್ಯರಿಗೆ ಈಗ ಸರ್ಕಾರದವರು ತಕ್ಕಮಟ್ಟಿಗೆ ಶಿಕ್ಷೆ ಮಾಡಿದ್ದು ಗುರುತಿದೆ, ಮೊನ್ನೆ ಹೇಳಿದ್ದೇನೆ ಯಾವ್ಯಾವ ಸೊಸೈಟಿಗಳು ತಪ್ಪು ಮಾಡಿವೆ. ಎಂಬುದನ್ನು ತಪ್ಪು ಮಾಡಿದ ಸೊಸೈಟಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವುದು ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನ ಪ್ರಶ್ನೆ ನೇಕಾರ ಸಂಘಗಳು ತಪ್ಪು ಮಾಡಿದ್ದಕ್ಕೆ ಬಹಳ ಕಳಕಳಿಯಿಂದ ಬಳಕೆದಾರರಿಗೆ ಏಕೆ ಶಿಕ್ಷೆ ಮಾಡುತ್ತೀರಿ ಅಂತ.

ಶ್ರೀ ಪಿ. ಎಂ. ನಾಡಗೌಡ.—ಸಹಕಾರ ಸಂಘಗಳಿಗೆ, ಸಂಸ್ಥೆಗಳಿಗೆ ರಿಬೇಟ್ ಕೊಡುತ್ತಾ ಇದ್ದೆವು, ಸದಸ್ಯರಿಗೆ ಪ್ರಯೋಜನವಾಗಿಲ್ಲ ಎಂದು ಕಂಡುಬಂದಿದೆ. ಯಾವಾಗಲೂ ನೇಕಾರ ಸಹಕಾರ ಸಂಘಗಳಲ್ಲಿ ಸದಸ್ಯರು ಯಾರು ಇರುತ್ತಾರೆ. ಅವರಿಗೆ ಇದರ ಲಾಭವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಸಿಕ್ಕುವುದಿಲ್ಲ.

ಶ್ರೀಮತಿ ಶಾರದಮ್ಮ ಮಹದೇವಪ್ಪ ಪಟ್ಟಣ್.—ಕೈ ಮಗ್ಗದ ಬಟ್ಟೆ ತಯಾರು ಮಾಡುವ ನೇಕಾರರಿಗೆ ಬಡ್ಡಿ ಇಲ್ಲದ ಸಾಲ ಕೊಟ್ಟು ಅವರ ತೊಂದರೆಯನ್ನು ನಿವಾರಣೆ ಮಾಡಲಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಅದನ್ನು ಯೋಚನೆ ಮಾಡಬಹುದು.

ಶ್ರೀ ಕೆ. ಎಚ್. ಪಾಟೀಲ್.—ದುರುಪಯೋಗಪಡಿಸಿಕೊಂಡಂಥ ಸಂಘಗಳ ಹೆಸರನ್ನು ಕೊಟ್ಟು ಅವುಗಳನ್ನು ದಂಡಿಸುವುದನ್ನು ಬಿಟ್ಟರೆ, ಉತ್ತಮವಾಗಿ ಕೆಲಸ ಮಾಡಿರತಕ್ಕಂಥ ಲಕ್ಷಾವಧಿ ನೇಕಾರರನ್ನು ದಂಡನೆಗೆ ಗುರಿ ಮಾಡುವುದು ಸರಿಯಾದ ಮಾರ್ಗ ಎಂದು ಅನಿಸುವುದಿಲ್ಲ. ಆದ್ದರಿಂದ ಉತ್ತಮವಾಗಿ ಕೆಲಸ ಮಾಡುವಂತಹ ನೇಕಾರಿ ಸಹಕಾರ ಸಂಘಗಳಿಗೆ ತಾವು ಯೋಗ್ಯವಾದ ಪರಿಹಾರವನ್ನು ಕೊಡಲಕ್ಕೆ ಪ್ರಾರಂಭಿಸುವಿರಾ? ಮತ್ತು ದುರುಪಯೋಗ ಪಡಿಸಿದಂತಹ ಸಂಘಗಳಿಗೆ ಯೋಗ್ಯವಾದ ಶಿಕ್ಷೆ ಮಾಡುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಮತ್ತೊಂದು ಪ್ರಶ್ನೆ ಕೇಳಿದರೆ ಮಾನ್ಯ ಸದಸ್ಯರ ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ಹೇಳುತ್ತೇನೆ.

ಶ್ರೀ ಎಂ. ಜಿ. ಬಣಕಾರ್.—ಆ ರಿಯಾಯಿತಿಗಳನ್ನೂ ಮತ್ತು ಸೌಲಭ್ಯಗಳನ್ನೂ ಅವರು ದುರುಪಯೋಗಪಡಿಸಿಕೊಂಡಿದ್ದರಿಂದ ಅವುಗಳನ್ನು ಕೈಬಿಡಲಾಯಿತು ಎಂದು ಈಗತಾನೆ ಮಾನ್ಯ ಮಂತ್ರಿಗಳು ತಿಳಿಸಿದರು. ಹಾಗೆ ದುರುಪಯೋಗಪಡಿಸಿಕೊಂಡ ಜನರನ್ನು ಶಿಕ್ಷೆ ಮಾಡುವ ಶಕ್ತಿಯಿಲ್ಲದೆ ಸರ್ಕಾರಕ್ಕೆ ಇದನ್ನು ಕೈಬಿಡಲಾಯಿತೆ, ಅಥವಾ ಇದನ್ನು ಒಂದು ಕ್ರಮಬದ್ಧ ರೀತಿಯಲ್ಲಿ ನಡೆಸುವುದಕ್ಕೆ ಸರ್ಕಾರಕ್ಕೆ ಶಕ್ತಿಯಿಲ್ಲದೆ ಈ ಸೌಲಭ್ಯಗಳನ್ನು ನಿಲ್ಲಿಸಲಾಯಿತೋ ?

ಶ್ರೀ ಪಿ. ಎಂ. ನಾಡಗಾಡ.—ಆ ಎರಡರ ಬಗ್ಗೆ ಅಗತ್ಯವಾದ ಅಧಿಕಾರ ಮತ್ತು ಶಕ್ತಿ ಈ ಎರಡೂ ಸರ್ಕಾರಕ್ಕಿದೆ.

ಶ್ರೀ ಎಂ. ಜಿ. ಬಣಕಾರ್.—ಹಾಗೆ ಶಕ್ತಿ ಇದ್ದರೆ ಆ ಯೋಜನೆಯನ್ನು ಏತಕ್ಕೆ ಕೈಬಿಡಲಾಯಿತು ? ನಮಗೆ ಒದಗಿಸಿರತಕ್ಕ ಪ್ರಶ್ನೋತ್ತರಗಳ ಪುಸ್ತಕಕ್ಕೆ 300 ರೂಪಾಯಿಗಳ ಖರ್ಚು ಬರುತ್ತೆಂದು ಕೇಳುತ್ತಿದ್ದೇನೆ, ನರಿಯಾದ ಉತ್ತರಗಳನ್ನು ಕೊಟ್ಟರೆ ನಾವು ಉಪಪ್ರಶ್ನೆಗಳನ್ನು ಕೇಳತಕ್ಕ ಅವಶ್ಯಕತೆಯೇ ಇರುವುದಿಲ್ಲ ಅಲ್ಲವೇ ?

ಅಧ್ಯಕ್ಷರು.—ಸದಸ್ಯರು ಪ್ರಶ್ನೆಗಳನ್ನು ಕಳುಹಿಸುತ್ತಾರೆ, ಅದಕ್ಕೆ ಸರ್ಕಾರದವರಿಂದ ಉತ್ತರಗಳು ಬರುತ್ತವೆ. ಅದರಲ್ಲಿ ನನ್ನ ಪಾತ್ರವೇನೂ ಇರುವುದಿಲ್ಲ. ಸಭೆಯಲ್ಲಿ ಸದಸ್ಯರು ಉಪಪ್ರಶ್ನೆಗಳನ್ನು ಹಾಕುತ್ತಾರೆ, ಮಂತ್ರಿಗಳು ಉತ್ತರ ಕೊಡುತ್ತಾರೆ. ಅದರ ಮೇಲೆ ಇಲ್ಲಿ ಆ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಮಾತ್ರ ಅವಕಾಶವಿಲ್ಲ.

———

Pension to Primary School Teachers

*Q.—678. **Sri N. B. SIRDESAI** (Khanapur).—

Will the Minister for Education be pleased to state:—

(*a*) whether it is a fact that the Minister for Education declared in his speech delivered on the 14th February 1967 during his visit to Bijapur District, that Primary School teachers would be given pension equal to 3/8 of their total pay and gratuity equal to their 15 months, pay amount;

(*b*) whether Government have passed any orders in this regard ?

A.—**Sri K. V. SHANKARA GOWDA** (Minister for Education).—

(*a*) Yes.

(*b*) Orders are under issue. As regards teachers other than District School Board Teachers, legislation is being contemplated to enable the School Board teachers to join the Triple Benefit Scheme.

Sri N. B. SIRDESAI.—May I know whether the quantum and rate of pension and gratuity that has been sanctioned to the primary school teachers is consistent with the rate of pension and gratuity that is granted to the other Government officers of their cadre ?

Sri K. V. SHANKARA GOWDA.—It is consistent with the rate paid to the Government servants.

Sri N. B. SIRDESAI.—May I know when orders will be issued and when they will be given effect to or whether there will be the usual delay at the Government level ?

Sri K. V. SHANKARA GOWDA.—The Bill has already been passed and there will be no delay.

———